‘ಅಯ್ಯೋಯ್ಯೋ’ ಅಂದ ಬಾಬಣ್ಣ. ‘ನೀವು ಹೋಗಿ ಹೋಗಿ ಹಂದಿಗೆ ಯಾಕೆ ಗುಂಡು ಹೊಡೆದಿರಪ್ಪಾ’ ಎನ್ನುತ್ತಾ ತಲೆಯ ಮೇಲೆ ಕೈಯಿಟ್ಟು ಕುಳಿತ.

ಹುಡುಗರಿಗೆ ಗಾಬರಿಯಾಯಿತು. ‘ಏನು ಬಾಬಣ್ಣ, ಏನಾಯಿತು?’ ಎನ್ನುತ್ತಾ ವಿಚಾರಿಸಿದರು.

ಬಾಬಣ್ಣ ಹೇಳಿದ ವಿಷಯ ತಿಳಿದು ಅವರಿಗೂ ತಾವು ತಪ್ಪು ಮಾಡಿದ್ದೇವೇನೋ ಅನ್ನಿಸಿತು. ಈಗ ಏನು ಮಾಡುವುದು? ಎಂದು ಬಾಬಣ್ಣನನ್ನೇ ಕೇಳಿದರು. ಉತ್ತರ ಸಿಗಲಿಲ್ಲ.

ಬಾಬಣ್ಣ ಅಲ್ಲಿಂದ ಹೊರಟು ನೇರವಾಗಿ ಶೆಟ್ಟರ ಮನೆಗೆ ನಡೆದ. ಶೆಟ್ಟರು ಎಲ್ಲವನ್ನೂ ಕೇಳಿಸಿಕೊಂಡು ತಾವೂ ತಲೆಯ ಮೇಲೆ ಕೈಇಟ್ಟು ಕುಳಿತರು. ಕೊನೆಗೆ ಇಬ್ಬರೂ ಆನಂದಣ್ಣನನ್ನು ಕರೆಸಿಕೊಳ್ಳುವ ನಿರ್ಧಾರಕ್ಕೆ ಬಂದು ಆನಂದಣ್ಣನನ್ನು ಕರೆಸಿಕೊಂಡರು. ಬಾಬಣ್ಣ ಹನಿಗಣ್ಣಿನಲ್ಲಿ ತಾನು ಯಾಕೆ ನಾಡ ಕೋವಿಯನ್ನು ತಂದು ಕೊಟ್ಟೆನೋ ಎಂದು ಹಲುಬಿದ.

ಕೊನೆಗೆ ಶೆಟ್ಟರು, ‘ಈಗ ಏನು ಮಾಡುವುದು ಆನಂದಣ್ಣ’ ಕೇಳಿದರು.

‘ಶೆಟ್ರೇ, ಈಗ ಏನು ಮಾಡ್ಲಿಕ್ಕಾಗ್ತದೆ? ಪಂಜುರ್ಲಿ ದೈವದ ಗುಡಿಗೆ ಹೋಗಿ ಕೈಮುಗಿಯುವುದು, ಕ್ಷಮೆ ಕೇಳಿ ತಪ್ಪು ಕಾಣಿಕೆ ಹಾಕುವುದು’ ಎಂದು, ಆಮೇಲೆ ‘ಮೊದಲಿಗೆ ಆ ನಾಡ ಕೋವಿಯನ್ನು ಹುಡುಗರ ಕೈಯಿಂದ ವಶಪಡಿಸಿಕೊಳ್ಳುವುದು ಮತ್ತು ಪಂಜುರ್ಲಿ ದೈವದ ಬಗ್ಗೆ ತಿಳಿಹೇಳುವುದು’ ಅಂದರು ಆನಂದಣ್ಣ.

ಶೆಟ್ಟರು ಜನ ಕಳುಹಿಸಿ ಕೋವಿಯನ್ನು ಹುಡುಗರ ಕೈಯಿಂದ ತರಿಸಿದರು. ಮತ್ತೆ ಪಂಜುರ್ಲಿ ಗುಡಿಯ ಇದಿರು ನಿಂತು ಎಲ್ಲರೂ ಕ್ಷಮೆ ಯಾಚಿಸಿ ತಪ್ಪು ಕಾಣಿಕೆ ಹಾಕಿದರು. ಆದರೆ ಬಾಬಣ್ಣ ನೆಮ್ಮದಿಯಲ್ಲಿರಲಿಲ್ಲ. ಆದರೆ ಶೆಟ್ಟರು ಬಾಬಣ್ಣನ ಕಡೆ ತಿರುಗಿ, ‘ಹೋಗಿ ವಿರಾಮ ಮಾಡಿ ಬಾಬಣ್ಣ. ಇವತ್ತು ಕಾಟೇಜ್ ಕಡೆ ಬರ್ಬೇಡಿ. ನಾನು ಬೇರೆ ಯಾರನ್ನಾದರೂ ಕರೆಸಿ ಆ ಅತಿಥಿಗಳ ಅಡುಗೆಯ ವ್ಯವಸ್ಥೆ ಮಾಡಿಸುತ್ತೇನೆ’ ಅಂದರು.

ಬಾಬಣ್ಣ ತನ್ನ ಮನೆಗೆ ನಡೆದ. ಸಂಜೆ ಶಾಸ್ತ್ರಿಗಳ ಮನೆಗೆ ಬಾಬಣ್ಣನ ಮನೆಯಿಂದ ಜನ ಬಂತು. ಬಾಬಣ್ಣನಿಗೆ ಜೋರಾಗಿ ಜ್ವರ ಬರುತ್ತಿದೆಯೆಂತಲೂ ಔಷಧ ಬೇಕೆಂತಲೂ ಬಂದವನು ಹೇಳಿದ. ಶಾಸ್ತ್ರಿಗಳು ನಡೆದ ವಿಚಾರಗಳನ್ನು ಕೇಳಿ ತಿಳಿದು ತಾವೂ ಪಂಜುರ್ಲಿಗೆ ಕೈಮುಗಿದು ಔಷಧ ನೀಡಿದರು.

ಆ ರಾತ್ರಿ ಈ ವಿಷಯ ಶಾಸ್ತ್ರಿಗಳ ಮನೆಯಲ್ಲಿ ಚರ್ಚೆಗೆ ಬಂತು. ಸಂಜಯನಿಗೆ ಈ ಪಂಜುರ್ಲಿ ಇತ್ಯಾದಿಯೆಲ್ಲ ಕೇವಲ ನಂಬಿಕೆಯ ಪ್ರಶ್ನೆಯಾಗಿದ್ದರೆ ಆಶಾ, ಶಾಸ್ತ್ರಿಗಳು ಮತ್ತು ಮಾದನಿಗೆ ಪಂಜುರ್ಲಿ ಸೀತಾಪುರದ ಇನ್ನೊಬ್ಬ ನಿವಾಸಿಯ ಹಾಗೆ ಕಾಣುತ್ತಿದ್ದ. ಪಂಜುರ್ಲಿ ದೈವಕ್ಕೆ ಗುಂಡು ಹೊಡೆಯುವುದು ಊರಿನ ಯಾವುದೇ ವ್ಯಕ್ತಿಗೆ ಗುಂಡು ಹೊಡೆದಷ್ಟೇ ಗಂಭೀರ ವಿಷಯವಾಗಿತ್ತು. ಅದರ ಮೇಲೆ ಪಂಜುರ್ಲಿ ಊರಿನ ಆರಾಧ್ಯ ದೈವ. ಶಾಸ್ತ್ರಿಗಳು ಈ ಬಗ್ಗೆ ಬಹಳ ಭಾವುಕರಾಗಿದ್ದರು.

ಮರುದಿನ ಬೆಳಗ್ಗೆ ಶಾಸ್ತ್ರಿಗಳು ಉಪಾಹಾರ ಮುಗಿಸುವ ವೇಳೆಗೆ ಬಾಬಣ್ಣನ ಮಗ ಅವರ ಮನೆಗೆ ಬಂದಿದ್ದ. ಬಂದವನು ಒಂದೇ ಸಮನೆ ಅಳುತ್ತಾ ಬಾಬಣ್ಣ ಏದುಸುರು ಬಿಡುತ್ತಿರುವುದಾಗಿಯೂ ನೀವೇ ಖುದ್ದಾಗಿ ಬಂದು ಔಷಧ ಕೊಡಬೇಕೆಂದೂ ವಿನಂತಿಸಿದ.

ಶಾಸ್ತ್ರಿಗಳು ಸ್ವಲ್ಪ ಹೊತ್ತು ಯೋಚಿಸಿ ಔಷಧಗಳ ಕಟ್ಟುಗಳನ್ನು ಜೋಳಿಗೆಗೆ ಹಾಕಿ ‘ನಡಿ, ಹೊರಡುವ’ ಎಂದರು. ಶಾಸ್ತ್ರಿಗಳು ರೋಗಿಯ ಮನೆಗೆ ಹೋಗುವುದು ಬಹಳ ಅಪರೂಪ. ಅವರಿಗೆ ಈಗ ವಯಸ್ಸಾಗಿದೆ. ಆದರೂ ಶಾಸ್ತ್ರಿಗಳು ಸೀತಾಪುರದ ಗದ್ದೆ ಹುಣಿಗಳನ್ನು ದಾಟಿ ಬಾಬಣ್ಣನ ಮನೆಗೆ ನಡೆದರು.

ಅತಿಥಿಗಳಾಗಿ ಬಂದವರು ಹಂದಿಗೆ ಗುಂಡು ಹೊಡೆದ ವಿಚಾರವೂ, ಬಾಬಣ್ಣನ ಅಸ್ವಸ್ಥತೆಯ ಸುದ್ದಿಯೂ ಶಾಸ್ತ್ರಿಗಳು ಬಾಬಣ್ಣನ ಮನೆಗೆ ಹೊರಟ ಸಂಗತಿಯೂ ಇಡೀ ಸೀತಾಪುರಕ್ಕೆ ಮಧ್ಯಾಹ್ನದ ಹೊತ್ತು ಸುದ್ದಿಯಾಯಿತು.

ಶಾಸ್ತ್ರಿಗಳು ಬಾಬಣ್ಣನ ನಾಡಿ ಹಿಡಿದು ಪರೀಕ್ಷಿಸಿದರು. ತುಂಬಾ ಹೊತ್ತು ಯೋಚಿಸಿದರು. ಅವನ ಬಾಯಿ, ಕಣ್ಣು ಬಿಡಿಸಿ ನೋಡಿದರು. ತನ್ನೊಂದಿಗೆ ತಂದಿದ್ದ ಔಷಧಗಳ ಕಟ್ಟಿನಿಂದ ನಾಲ್ಕಾರು ಕಟ್ಟುಗಳನ್ನು ಬಾಬಣ್ಣನ ಹೆಂಡತಿಗೆ ನೀಡಿ, ‘ಚೇತರಿಸುತ್ತಾರೆ. ಹೆದರಬೇಡಿ, ದೇವರನ್ನು ಪ್ರಾರ್ಥಿಸಿ’ ಎಂದು ಸಂತೈಸಿದರು. ಮನೆಗೆ ಮರಳಿ ಬಂದ ಶಾಸ್ತ್ರಿಗಳು ಮಾದನನ್ನು ಕರೆದು ಬಾಬಣ್ಣನ ಮಗನನ್ನೂ ಅವನ ಜೊತೆ ಕಾಡಿಗೆ ಕಳುಹಿಸಿ ಕೆಲವು ವಿಶೇಷ ಬೇರುಗಳನ್ನು ತರಲು ಹೇಳಿದರು. ಅವುಗಳು ಕೈ ಸೇರಿದ ಮೇಲೆ ಹೇಗೆ ಅವುಗಳನ್ನು ಉಪಯೋಗಿಸಬೇಕು ಎಂಬುದನ್ನು ಬಾಬಣ್ಣನ ಮಗನಿಗೆ ವಿವರಿಸಿದರು.

ಸಂಜೆಯ ಹೊತ್ತಿಗೆ ಬಾಬಣ್ಣನ ಮನೆಯಿಂದ ಬಾಬಣ್ಣನ ಸ್ಥಿತಿ ಗಂಭೀರವಾಗಿದೆಯೆಂದೂ ಅವನಿಗೆ ಈಗ ಉಸಿರಾಡಲು ಕಷ್ಟವಾಗುತ್ತಿದೆಯೆಂಬ ಸುದ್ದಿಯೂ ಬಂತು. ಅದರ ಜೊತೆಯಲ್ಲಿ ಬಾಬಣ್ಣನ ಮಗ ಮತ್ತು ಹೆಂಡತಿಗೂ ಈಗ ಜ್ವರ ಪ್ರಾರಂಭವಾಗಿದೆ ಎಂಬ ಮಾತೂ ಇತ್ತು. ಶಾಸ್ತ್ರಿಗಳು ಚಿಂತಾಕ್ರಾಂತರಾದರು. ಸಂಜಯ್ ಆತಂಕದಲ್ಲಿ, ‘ಶಾಸ್ತ್ರಿಗಳೇ, ನೀವು ಇಷ್ಟು ಮಂಕಾಗಿದ್ದನ್ನು ನಾನು ಬಂದ ಮೇಲೆ ನೋಡಿಲ್ಲ’ ಎಂದ.

ಶಾಸ್ತ್ರಿಗಳು ‘ಸಂಜಯ್, ನನಗೆ ಬಾಬಣ್ಣನದ್ದೇ ಚಿಂತೆಯಾಗುತ್ತಿದೆ. ಬೆಳಗ್ಗೆ ಅವನ ಮನೆಗೆ ಹೋಗಿ ಬಂದಿದ್ದೇನಲ್ಲ. ಆಗಲೇ ಯಾಕೋ ಸ್ವಲ್ಪ ಆತಂಕ ಪ್ರಾರಂಭವಾಗಿತ್ತು’ ಎಂದರು.

‘ಯಾಕೆ?’ ಸಂಜಯ್ ಪ್ರಶ್ನಿಸಿದ.

‘ಬಾಬಣ್ಣನ ನಾಡಿ ನೋಡುವಾಗ ಅವನಿಗೆ ಈಗ ಬಂದ ಜ್ವರ ಈ ಊರಲ್ಲಿ ಕಾಣಿಸುವ ಜ್ವರದ ಹಾಗೆ ಕಾಣಲಿಲ್ಲ’ ಅಂದರು ಶಾಸ್ತ್ರಿಗಳು.

ಸಂಜಯ್ ‘ಶಾಸ್ತ್ರಿಗಳೇ, ಜ್ವರದಲ್ಲೂ ಈ ಊರಿನ ಜ್ವರ, ಪರ ಊರಿನ ಜ್ವರ ಅಂತ ಬೇರೆ ಜಾತಿ ಇದೆಯೇ ಹೇಗೆ?’ ಎನ್ನುತ್ತಾ ಸ್ವಲ್ಪ ವ್ಯಂಗ್ಯವಾಗೇ ಕೇಳಿದ.

‘ನೋಡು ಸಂಜಯ್, ಈ ಊರಿನವರಿಗೆ ಯಾವ ಕಾಯಿಲೆ ಬರುತ್ತದೆ, ಅದಕ್ಕೆ ಏನು ಮದ್ದು ಕೊಡ್ಬೇಕು ಎಂದು ನನಗೆ ಚೆನ್ನಾಗಿ ಗೊತ್ತು. ಅದಕ್ಕೇ ಈ ಊರಿನವರ ಕಾಯಿಲೆಗೆ ಬೇಕಾದ ಔಷಧವನ್ನು ಈ ಊರಿನ ಕಾಡಿನಲ್ಲೇ ದೇವರು ಇಟ್ಟಿದ್ದಾರೆ ಎಂದುಕೊಂಡವನು ನಾನು. ಆದರೆ ಬಾಬಣ್ಣನಿಗೆ ಬಂದ ಜ್ವರ ಈ ಊರಿನದ್ದಲ್ಲ ಅನಿಸಿದೆ. ಆದರೂ ನನಗೆ ಹೊಳೆದ ಔಷಧ ಕೊಟ್ಟಿದ್ದೇನೆ, ಆದರೆ ನನಗೆ ಅವನು ಚೇತರಿಸುವ ಭರವಸೆ ಇಲ್ಲ’ ಅಂದರು.

ಅಲ್ಲೇ ಇದ್ದ ಸೀತಮ್ಮ ‘ಪಂಜುರ್ಲಿಗೇ ಗುಂಡು ಹೊಡೆದರೆ ಮತ್ತೇನಾದೀತು?’ ಅಂದರು ಸ್ವಲ್ಪ ಕೋಪದಲ್ಲೇ.

‘ಅಲ್ಲ ಸೀತಾ, ಇದು ಪಂಜುರ್ಲಿಯ ಕೋಪವಾದರೆ ಅದಕ್ಕೆ ನಾವು ಪರಿಹಾರ ಮಾಡಬಹುದು. ಎಷ್ಟಾದರೂ ಪಂಜುರ್ಲಿ ನಮ್ಮ ಊರಿನ ದೈವ. ನಾವೆಲ್ಲಾ ಕೈಮುಗಿದು ಕೇಳಿಕೊಂಡರೆ ಒಪ್ಪದೆ ಎಲ್ಲಿ ಹೋಗುತ್ತಾನೆ ಅವನು? ಆದರೆ ಇದು ಹಾಗಲ್ಲ ಎಂದು ಕಾಣ್ತದೆ. ಇಂಥ ಜ್ವರ ನಾನು ಈವರೆಗೆ ನೋಡಿಲ್ಲ’ ಅಂದರು.

ಸೀತಮ್ಮನಿಗೂ ‘ಹೌದಾ?’ ಎಂದು ಅನಿಸಿ ಇದು ಈಗ ಗಂಭೀರ ಸಮಸ್ಯೆಯಾಗಿ ಕಂಡಿತು.

ರಾತ್ರಿ ಊಟ ಮಾಡಿ ಮಲಗಿದ ಶಾಸ್ತ್ರಿಗಳನ್ನು ನಡುರಾತ್ರಿ ಯಾರೋ ಬಂದು ಕರೆದರು. ಶಾಸ್ತ್ರಿಗಳು ಹೊರಗೆ ಬಂದಾಗ ಬಾಬಣ್ಣನ ಸ್ಥಿತಿ ಬಹಳ ಗಂಭೀರವಾಗಿರುವುದಾಗಿ ತಿಳಿಯಿತು. ಶಾಸ್ತ್ರಿಗಳು ತಮ್ಮ ಔಷಧಿ ಡಬ್ಬಿಯಿಂದ ಏನೋ ಬೇರನ್ನು ತೆಗೆದು ತಮ್ಮ ಧನ್ವಂತರೀ ದೇವರ ಮೂರ್ತಿಯ ಎದುರು ಇಟ್ಟು ಪ್ರಾರ್ಥಿಸಿ ಅದನ್ನು ಬಂದವರಿಗೆ ನೀಡಿ ಹೇಗೆ ಉಪಯೋಗಿಸಬೇಕೆಂದು ಹೇಳಿದರು.

‘ಇನ್ನೇನಿದ್ದರೂ ದೇವರ ಮೇಲೆ ಭಾರ ಹಾಕುವುದು’ ಎನ್ನುತ್ತಾ, ‘ನನ್ನಲ್ಲಿರುವ ವಿವಿಧ ಔಷಧಗಳ ಪ್ರಯೋಗ ಮಾಡಿಯಾಯಿತು’ ಎಂದರು.

ಶಾಸ್ತ್ರಿಗಳಿಗೆ ಮತ್ತೆ ನಿದ್ದೆ ಹತ್ತಲಿಲ್ಲ. ಬೆಳಗಿನ ಜಾವದಲ್ಲಿ ಜನ ಬಂದು ಬಾಬಣ್ಣ ನಿಧನರಾದ ಸುದ್ದಿ ಶಾಸ್ತ್ರಿಗಳಿಗೆ ಮುಟ್ಟಿಸಿದರು.

ಸಂಜಯ್ ಏಳುವಾಗ ಶಾಸ್ತ್ರಿಗಳು ಬಹಳ ದುಃಖದಿಂದ ಕುಳಿತಿದ್ದರು. ಸಂಜಯನಿಗೆ ಅವರು ಬಾಬಣ್ಣ ನಿಧನರಾದ ವಿಷಯ ತಿಳಿಸಿದರು.

ಒಂದು ಕ್ಷಣ ಸಂಜಯನೂ ಮಂಕಾದ. ‘ಛೇ! ಛೇ!’ ಎಂದು ಮರುಗಿದ.

ಇನ್ನೇನು ಶಾಸ್ತ್ರಿಗಳು ಪೂಜೆ ಮುಗಿಸಿ ಉಪಾಹಾರಕ್ಕೆ ಏಳಬೇಕು ಎನ್ನುವಾಗ ಮತ್ತೊಂದು ಸುದ್ದಿ ಬಂತು. ಅದು ಈಗ ಬಾಬಣ್ಣನ ಮಗ ಮತ್ತು ಹೆಂಡತಿಗೆ ಜ್ವರ ಹೆಚ್ಚಾಗಿದೆ ಎನ್ನುವುದಾಗಿದೆ. ಹಾಗೇ ಅಲ್ಲಿ ಇಲ್ಲಿ ಒಬ್ಬಿಬ್ಬರಲ್ಲಿ ಇದೇ ತರಹದ ಜ್ವರ ಕಾಣಿಸಿದೆ ಎನ್ನುವುದೂ ಕೂಡಾ. ಸ್ವಲ್ಪ ಸಮಯದಲ್ಲಿ ಒಬ್ಬೊಬ್ಬರೇ ಎನ್ನುವಂತೆ ಹಲವರು ಶಾಸ್ತ್ರಿಗಳ ಮನೆಗೆ ಔಷಧಿಗೆ ಬಂದರು. ಶಾಸ್ತ್ರಿಗಳಿಗೆ ಆತಂಕವಾಯಿತು. ಬಂದವರಿಗೆಲ್ಲ ಸರದಿಯಲ್ಲಿ ಔಷಧ ನೀಡಲು ಮುಂದಾದರು.

(ಸಶೇಷ)